MC No.34/2024

PW-1

**(ಇಂದು ದಿಃ 22-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ಶ್ರೀ. AM ವಕೀಲರಿಂದಃ-**

ದಿನಾಂಕ 26.04.2018 ರಂದು ನನ್ನ ಮದುವೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಮದುವೆ ನಂತರ ನನ್ನ ಹೆಂಡತಿ 15 ದಿನ ಮಾತ್ರ ನನ್ನ ಜೊತೆ ವಾಸವಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಸಾಕಷ್ಟು ಬಾರಿ ಎದರುದಾರಳನ್ನು ಬೇಟಿಯಾಗಿ ನನ್ನ ಜೊತೆ ಬಾ ಸಹ ಜೀವನ ಮಾಡೋಣ ಎಂದು ಕರೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಆದರೆ ಎದರುದಾರಳ ಬರದ ಕಾರಣ ಸೇಡಂ ಮತ್ತು ಅಡಕಿಯಲ್ಲಿ ಪಂಚಯಾತಿ ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಮತ್ತು ನನ್ನ ತಾಯಿ ಎದರುದಾರಳಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ಕೊಟ್ಟು ಪ್ರಾಣ ಬೇದರಿಕೆ ಹಾಕಿದ್ದೇವೆ ಎಂದರೆ ಸರಿಯಲ್ಲ, ಎದರುದಾರಳು ನಮ್ಮ ಮನೆಯಲ್ಲಿದ್ದಾಗ ಅವಳಿಗೆ ಸರಿಯಾಗಿ ಊಟಾ ಹಾಕಿಲ್ಲ ಮತ್ತು ನಾನು ಅವಳ ಜೊತೆ ಇರುತ್ತಿರಲಿಲ್ಲ ಎಂದರೆ ಸರಿಯಲ್ಲ, ನಾನು ಪ್ರತಿದಿನ ರಾತ್ರಿ ಮದ್ಯಪಾನ ಮಾಡಿಕೊಂಡು ಬಂದು ನನ್ನ ಹೆಂಡತಿಗೆ ಹಿಂಸೆ ಕೊಟ್ಟ್ಯು 3 – 4 ಬಾರಿ ಅವಳನ್ನು ಮನೆಯಿಂದ ಹೊರ ಹಾಕಿದ್ದೆ ಎಂದರೆ ಸರಿಯಲ್ಲ, ನಾನು ಮತ್ತು ನನ್ನ ತಾಯಿ ಸೇರಿಕೊಂಡು ಗ್ಯಾಸ್ ಸೀಲೆಂಡರ್ ಹಾನ್ ಮಾಡಿ ನನ್ನ ಹೆಂಡತಿಯನ್ನು ಕೋಣೆಯಲ್ಲಿ ಕೂಡಿಹಾಕಿ ಚೀಲಕಾ ಹಾಕಿದ್ದೇವೆ ಎಂದರೆ ಸರಿಯಲ್ಲ, ನನ್ನ ಹೆಂಡತಿ ಮುದೋಳ್ ಠಾಣೆಗೆ ದೂರು ಕೊಟ್ಟಿದ್ದಳು ಎಂದರೆ ಸರಿ. ನನ್ನ ಪಾಡಿಗೆ ನಾನು ಇರುತ್ತೇನೆ ಎಂದು ನನ್ನಿಂದ ಪೊಲೀಸರು ಮುಚ್ಚಳಿಕೆ ಬರೆಸಿಕೊಂಡರು ಎಂದರೆ ಸರಿ . ನನ್ನ ಮದುವೆಯಲ್ಲಿ ನನ್ನ ಹೆಂಡತಿಯ ಕಡೆಯವರು 50,000/- ಮತ್ತು 3 ತೊಲೆ ಬಂಗಾರ ಕೊಟ್ಟಿದ್ದರು ಎಂದರೆ ಸರಿ. ನನ್ನ ಜೊತೆ ಬಂದರೆ ಎದರುದಾರಳ ಪ್ರಾಣಕ್ಕೆ ತೊಂದರೆ ಆಗಬಹುದು ಎಂದು ಅವಳು ಬರುತ್ತಿಲ್ಲ ಎಂದರೆ ಸರಿಯಲ್ಲ, ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ,**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**